ತನ್ನ ಮಗ್ಗುಲಿಗೆ ಕುಳ್ಳಿರಿಸಿಕೊಂಡು ತಾನು ತಿನ್ನೋದರಲ್ಲಿ ನನಗೂ ತಿನ್ನಿಸುತ್ತಿದ್ದ.

'ಮಾಸ್ಸೀ... ಬಿಮನಸ್ಸಿಯಾಕಿರ ಇಟ ಬಯ್ಕಿ ಎಂದಿಂಡಿಗೂ ಸೊಣ್ಣು' (ಬಿಮನ್ಸೆಯಾಗಿದ್ದಿ... ನಿನ್ನ ಬಯಕೆ ಏನಿದ್ದರೂ ಹೇಳು...)

ಅಂತ ಮುದ್ದುಗರೆಯೋನು. ಅಷ್ಟೊಂದು ಅಕ್ಕರ ಅವನಿಗೆ. ಕೋಳಿಬಾಡಿನ್ಸೆಸರು, ಕೋಲುತುದಿಯಾಗಿನ ಹಿಟ್ಟು, ಪಕ್ಕದಲ್ಲಿ ಸಾರಾಯಿ ಇದ್ದರೆ ಮೈಮರೆಯುತ್ತಿದ್ದ. ನಮ್ಮ ಹಟ್ಟಿ ಹೆಂಗಸರಿಗೆ ಇವೆಲ್ಲ ಯಾವುದೂ ಹೊಸದಲ್ಲ! ಹಟ್ಟಿಯಲ್ಲಿದ್ದ ಎಲ್ಲ ಗಂಡಸರೂ ಹೆಚ್ಚು ಕಡಿಮೆ ಹೀಗೆಯೆ ಇದ್ದರು. ನಮ್ಮ ಸುತ್ತಮುತ್ತಲ ಹಳ್ಳಿಗಳಲ್ಲಿ ಯಾರೇ ಕಳ್ಳತನ ಮಾಡಿದರೂ ಕಳ್ಳತನದ ದೂರು ಬರುತ್ತಿದ್ದುದು ನಮ್ಮ ಹಟ್ಟಿಯ ಮೇಲೆ. ಕದ್ದವರನ್ನು ಹುಡುಕಿಕೊಂಡು ಪೊಲೀಸಿನವರು ಮೊದಲು ಬರುತ್ತಿದ್ದುದು ನಮ್ಮ ಹಟ್ಟಿಗೆ! ಇದೊಂದು ರೀತಿಯ ವಾಡಿಕೆಯಾಗಿತ್ತು. ಎಷ್ಟೋ ಸಲ ಬೇರೆಯವರು ಕದ್ದದ್ದನ್ನು ನಮ್ಮ ಹಟ್ಟಿ ಗಂಡಸರ ಮೇಲೆ ಹೊರಿಸಿ ಜೈಲಿಗೆ ಹಾಕಿರುವುದೂ ಉಂಟು. ಇವೆಲ್ಲವೂ ನಮಗೆ ಸಹಜವೆನಿಸುವಷ್ಟರಮಟ್ಟಿಗೆ ಒಗ್ಗಿಹೋಗಿತ್ತು. 'ಹಿಂಗೆ ಕಂಡೋರ ಮನೆಯಿಂದ ಕದ್ದು ತರೋದು ತೆಪ್ಪಲ್ಲವೆ?' ಎಂದು ಕೇಳಿದರೆ, 'ತಿಗ್ಟು ಸೆಯ್ಯಾದಿಂದಿಗೂ ನಂಗಳ್ನ ತೆಕ್ರು ಅಂಡು ಜೈಲಿಗೆ ಓಡಾದು. ಅತ್ಲೂ ಎಂತೂ ಸೆಯ್ಯಾದೆ, ಜೈಲ್ಕು ಹೋಗಕ್ಕಿಂತ ತಿಗ್ಡು ಸೇಂದೇ ಜೈಲ್ಕು ಹೋಗುದು ಮೇಲಲ್ಲೆ! ನಂಗ ಪರ್ದಪೋದುಂಡ ಈ ಯ್ಯಡ್ಡಿ ನಂಗಳನ್ನ ತೆಕ್ರು ಅಂಡುಟು ಕೂಡಕ್ಕಿ. ಡೋಂಟ್ ಕೇರ್ಲ; ಐಯಾಮ್ ಥೀಫ್ ಎಂದಿಪ್ಪೋ? ನಂಗಳಂದ ಐಟಾ ಇಕ್ಕಿರಾ ಆಸ್ತಡ್ಡಿ ದೋಸಲಿಲ್ಲ! ತಿಂಗ್ರಿರುತ್ಕು ತಿಗ್ಡರೋ ಎತ್ನ ಬೇಕೋ ಅತ್ನ ಮಾತ್ರ!'

(ಕದಿಯದಿದ್ದರೂ ನಮ್ಮನ್ನು ಕಳ್ಳರು ಅಂತ ಜೈಲಿಗೆ ಹಾಕ್ತಾರೆ! ಅದಕ್ಕೆ ಏನೂ ಮಾಡದೆ ಜೈಲಿಗೆ ಹೋಗೋದುಕ್ಕಿಂತ, ಕಳ್ಳತನ ಮಾಡಿಯೇ ಜೈಲಿಗೆ ಹೋಗೋದು ಲೇಸಲ್ಲವೆ! ದೇವರೇನು ನಮ್ಮನ್ನು ಕಳ್ಳರು ಅಂತ ಹುಟ್ಟಿಸಿರಲಿಲ್ಲ! ನಾವು ಹುಟ್ಟಿದಾಗಿನಿಂದ ಇವರೆಲ್ಲಾ ನಮ್ಮನ್ನು ಕಳ್ಳರು ಅಂತ ಕರೆದಿದ್ದು! ಇದಕ್ಕೆಲ್ಲಾ ನಾನು ಡೋಂಟ್ ಕೇರ್. ಐಯಾಮ್ ಥೀಫ್ ಏನೀಗ? ನಾವೇನು ಅವರ ಇರಬರೋ ಆಸ್ತಿನ ದೋಚುತ್ತೀವಾ? ಉಣ್ಣಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಕದಿತೀವಿ!) ಎಂದು ದಬಾಯಿಸಿ ಬಾಯಿ ಮುಚ್ಚಿಸುತ್ತಿದ್ದ. ಅವನ ಒಂದು ಸಣ್ಣ ಮಾತು ಅವನ ಜನಾಂಗದ ಅಸಹಾಯಕತೆ ಮತ್ತು ಅವರ ಬದುಕಿನ ಬರ್ಬರತೆಯನ್ನು ಹೇಳುತ್ತಿದ್ದವು. ಪಶ್ಚಾತಾಪದ ಭಾವನೆಗಳು ಅವನಿಂದ ಎಂದೋ ದೂರವಾಗಿದ್ದವು.

ಅವಳಿಗೆ ನೆನಪುಗಳು ಮರುಕಳಿಸಿದವು:

ಚಿಕ್ಕರಾಮ ನಮ್ಮ ಆಸುಪಾಸಿನಲ್ಲೆಲ್ಲಾ 'ಕಳ್ಳರಾಮ'ನೆಂದೇ ಪ್ರಸಿದ್ಧನಾಗಿದ್ದ. ಹತ್ತಾರು ಕೆರೆಗಳ ನೀರು ಕುಡಿದೋನು. ತರಾವರಿ ಜನಗಳನ್ನ ನೋಡಿದೋನು. ಮೂರ್ನಾಲ್ಕು ಭಾಷೆಗಳು ಅವನ ನಾಲಗೆಯ ಮೇಲೆ ಉಲಿಯುತ್ತಿದ್ದವು. ಕಳುವು ಮಾಡುವುದರಲ್ಲಿ ನಿಸ್ಸೀಮ. ಕದಿಯುವುದರಲ್ಲಿ ಅವನ ಲೆಕ್ಕಾಚಾರ ಎಂದೂ ತಪ್ಪುತ್ತಿರಲಿಲ್ಲ. ಮಿಂಚಿನ ವೇಗದಲ್ಲಿ ಕದ್ದು ಮಾಯವಾಗುತ್ತಿದ್ದ. ಪೊಲೀಸ್ ಸ್ಟೇಷನ್‌ನಲ್ಲಿ ಹಲವಾರು ಕಳ್ಳತನದ ಕೇಸುಗಳು ಇವನ ಮೇಲೆ ದಾಖಲಾಗಿದ್ದವು. ಆದರೂ ಪೊಲೀಸರಿಗೆ ಇವನನ್ನು ಮಾಲು ಸಮೇತ ಹಿಡಿಯಲಾಗಿರಲಿಲ್ಲ! ಅವನ ಕಣ್ಣುಗಳು ಹಗಲಿಗಿಂತ ರಾತ್ರಿ ವೇಳೆ ಹೆಚ್ಚು ಚುರುಕಾಗಿರುತ್ತಿದ್ದವು. ಅವನ ದೇಹದ ವ್ಯಾಕರಣವೇ ಕಳ್ಳತನಕ್ಕೆ ಅನುಕೂಲವಾಗುವಂತೆ ಪರಿವರ್ತನೆಗೊಂಡಿತ್ತು. ಹಗಲು ಹೊತ್ತಿನಲ್ಲಿ ಹಟ್ಟಿಯಲ್ಲೇ ಇರುತ್ತಿದ್ದ. ತೋಟ, ಬಣವೆ,

